## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ | : | 91 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ ( ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.08.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಒಟ್ಟು 46.460 ಸರ್ಕಾರಿ ಶಾಲೆಗಳಲ್ಲಿ ಕನಿಷ್ಠ ಮೂಲಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಇವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಕರ್ಯ /ಸೌಲಭ್ಯಗಳ ಕೊರತೆಯನ್ನು ಗುರುತಿಸಿ ನಿವಾರಿಸುವುದು ನಿರಂತರ ಪ್ರಕ್ರಿಯೆಯಾಗಿದ್ದು, ಈ ಸಂಬಂಧ ಪ್ರತಿ ವರ್ಷ ರಾಜ್ಯ ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಮತ್ತು ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳಡಿ ಮಂಜೂರಾಗುವ ಅನುದಾನದಲ್ಲಿ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br>ರಾಜ್ಯ ವಲಯದ ಅನುದಾನದಡಿಯಲ್ಲಿ ಈ ಕೆಳಕಂಡ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ.<br>• ನೂತನ ಶಾಲಾ ಕೊಠಡಿಗಳ ನಿರ್ಮಾಣ.<br>• ಶಾಲಾ ಕೊಠಡಿಗಳ ದುರಸ್ತಿ.<br>• ಶಾಲಾ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ.<br>• ಶಾಲೆಗಳಿಗೆ ಪೀಠೋಪಕರಣಗಳ ಸರಬರಾಜು.<br>ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಈ ಕೆಳಕಂಡ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ.<br>• ನೂತನ ಶಾಲಾ ಕೊಠಡಿಗಳ ನಿರ್ಮಾಣ.<br>• ಶಾಲಾ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆ.<br>• ಶಾಲೆಗಳಿಗೆ ಪೀಠೋಪಕರಣಗಳ ಸರಬರಾಜು. |

<table>
<tr>
<td></td>
<td></td>
<td>

• ಕುಡಿಯುವ ನೀರು.

CEPMIZ ಯೋಜನೆಯಡಿ ಗಣಿಬಾಧಿತ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

ಕಲ್ಯಾಣ ಕರ್ನಾಟಕ ಭಾಗದ 07 ಜಿಲ್ಲೆಗಳ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ ಅಗತ್ಯತೆ ಮತ್ತು ಅರ್ಹತೆಯಂತೆ ಕೆ.ಕೆ.ಆರ್.ಡಿ.ಬಿ. ಅನುದಾನದಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

ಸಮುದಾಯ ಮತ್ತು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CCSR) ಮತ್ತು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಕಾರ್ಯಕ್ರಮದಡಿ ಸ್ಥಳೀಯ ದಾನಿಗಳು ಮತ್ತು ವಿವಿಧ ಸಂಸ್ಥೆಗಳ ಮೂಲಕ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ಅವಕಾಶ ಕಲ್ಪಿಸಲಾಗಿದೆ.

ಹಿಂದಿನ ಸಾಲುಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಒದಗಿಸಲಾಗಿರುವ ಅನುದಾನದ ವಿವರಗಳನ್ನು **ಅನುಬಂಧ-1ರಲ್ಲಿ** ಲಗತ್ತಿಸಲಾಗಿದೆ.

</td>
</tr>
<tr>
<td>ಆ)</td>
<td>ಸರ್ಕಾರದ ಅಧಿಕೃತ ಮಾಹಿತಿಯ ಪ್ರಕಾರ ರಾಜ್ಯದ 39,478 ಶಾಲೆಗಳಲ್ಲಿ ವಿಶೇಷಚೇತನ ಸ್ನೇಹಿ ಶೌಚಾಲಯ. 4.755 ಶಾಲೆಗಳಿಗೆ ಕಾಂಪೌಂಡ್ ಮತ್ತು 2.039 ಬಾಲಕರಿಗೆ ಹಾಗೂ 701 ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲದಿರುವುದು ನಿಜವೇ; ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿಲ್ಲದೆ ಅವರ ಶಿಕ್ಷಣಕ್ಕೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ;</td>
<td>

ಎಲ್ಲಾ ಶಾಲೆಯಲ್ಲಿ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯಗಳನ್ನು ಒದಗಿಸಲಾಗಿದೆ. ಪ್ರಸ್ತುತ ದುರಸ್ತಿ ಅಗತ್ಯವಿರುವ 89 ಶೌಚಾಲಯಗಳನ್ನು ದುರಸ್ತಿಗೊಳಿಸಲು ಕ್ರಮವಹಿಸಿದೆ.

ಕಳೆದ ಮೂರು ವರ್ಷಗಳಲ್ಲಿ ಕೆಳಕಂಡ ವಿವರದಂತೆ ಶೌಚಾಲಯ ನಿರ್ಮಾಣಕ್ಕೆ ಅನುದಾನ ಒದಗಿಸಲಾಗಿದೆ.

<table>
<tr><th>ವರ್ಷ</th><th>ಮಂಜೂರಾದ ಶೌಚಾಲಯ ಘಟಕಗಳು</th><th>ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ)</th></tr>
<tr><td>2022-23</td><td rowspan="3">7650</td><td>3500.00</td></tr>
<tr><td>2023-24</td><td>8000.00</td></tr>
<tr><td>2024-25</td><td>12106.05</td></tr>
<tr><td>2025-26</td><td>1582</td><td>6328.00</td></tr>
</table>

ಸಮಗ್ರ ಶಿಕ್ಷಣ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಶೌಚಾಲಯಗಳ ಬಗ್ಗೆ

</td>
</tr>
</table>

<table>
<tr>
<td></td>
<td></td>
<td>ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಅನುಗುಣವಾಗಿ ಶೌಚಾಲಯಗಳನ್ನು ನಿರ್ಮಿಸಿ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗುತ್ತಿದೆ.<br><br>ಅದರಂತೆ, ಸಮಗ್ರ ಶಿಕ್ಷಣ ಯೋಜನೆಯಡಿ 2025-26ನೇ ಸಾಲಿನಲ್ಲಿ 99 ಬಾಲಕರ ಶೌಚಾಲಯ ಹಾಗೂ 37 ಬಾಲಕಿಯರ ಶೌಚಾಲಯಗಳು ಮಂಜೂರಾಗಿರುತ್ತದೆ. 2026-27ನೇ ಸಾಲಿನಲ್ಲಿ 98 ಬಾಲಕರ ಶೌಚಾಲಯ, 80 ಬಾಲಕಿಯರ ಶೌಚಾಲಯಗಳು ಹಾಗೂ 124 ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗಾಗಿ ಶೌಚಾಲಯಗಳು ಮಂಜೂರಾಗಿರುತ್ತದೆ.</td>
</tr>
<tr>
<td>ಇ)</td>
<td>ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಪ್ರಸ್ತುತ ಬರೋಬ್ಬರಿ 57.706 ಶಿಕ್ಷಕರ ಕೊರತೆ ಇರುವುದು ನಿಜವೇ: ಶೈಕ್ಷಣಿಕ ವರ್ಷ ಆರಂಭವಾಗಿದ್ದರೂ ಶಿಕ್ಷಕರ ಹುದ್ದೆಗಳು ಖಾಲಿ ಉಳಿದಿದ್ದರೆ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಧಕ್ಕೆಯಾಗುವುದಿಲ್ಲವೇ: ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಪರ್ಯಾಯ ಯೋಜನೆಗಳೇನು:</td>
<td>ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2026-27ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಪ್ರಸ್ತುತ ಖಾಲಿಯಿರುವ ಶಿಕ್ಷಕರುಗಳ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರುಗಳನ್ನು ತಾತ್ಕಾಲಿಕವಾಗಿ ನೇರ ನೇಮಕಾತಿ ಮೂಲಕ ಖಾಯಂ ಶಿಕ್ಷಕರನ್ನು ಭರ್ತಿ ಮಾಡುವವರೆಗೆ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಎಂಬ ಷರತ್ತಿಗೊಳಪಟ್ಟು, ಪ್ರಾಥಮಿಕ ಶಾಲೆಗಳಿಗೆ 40,000 ಮತ್ತು ಪ್ರೌಢ ಶಾಲೆಗಳಿಗೆ 11,000 ಸೇರಿದಂತೆ ಒಟ್ಟಾರೆ 51,000 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಮಂಜೂರಾತಿ ನೀಡಿದೆ. ರಾಜ್ಯದಲ್ಲಿ ಖಾಲಿಯಿರುವ ಹುದ್ದೆಗಳ ಎದುರಾಗಿ ಅರ್ಹ ಅತಿಥಿ ಶಿಕ್ಷಕರನ್ನು ನಿಯಮಾನುಸಾರ ನೇಮಕ ಮಾಡಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕೆ ಧಕ್ಕೆಯಾಗುವುದಿಲ್ಲ.<br><br>2026-27ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಈ ಕೆಳಕಂಡ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
<table>
<tr><th>ಕ್ರ.ಸಂ</th><th>ವಿವರ</th><th>ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಜಿಪಿಟಿ ಶಿಕ್ಷಕರು</td><td>8500</td></tr>
<tr><td>2</td><td>ಪಿಎಸ್ ಟಿ ಸಹಶಿಕ್ಷಕರು</td><td>900</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>3</td><td>ದೈಹಿಕ ಶಿಕ್ಷಣ ಶಿಕ್ಷಕರು</td><td>150</td></tr>
<tr><td>4</td><td>ಗಣಕ ವಿಜ್ಞಾನ ಶಿಕ್ಷಕರು</td><td>500</td></tr>
<tr><td colspan="2">ಒಟ್ಟು</td><td>10050</td></tr>
</table>
2026-27ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಸಹಶಿಕ್ಷಕರು 4500, ದೈಹಿಕ ಶಿಕ್ಷಣ ಶಿಕ್ಷಕರು 450, ಒಟ್ಟಾರೆಯಾಗಿ 4950 ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ.
</td>
</tr>
<tr>
<td>ಈ)</td>
<td>ರಾಜ್ಯದ 630 ಶಾಲೆಗಳಿಗೆ ವಿದ್ಯುತ್ ಸಂಪರ್ಕವೇ ಇಲ್ಲದಿರುವುದು. 606 ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಹಾಗೂ ಶೇ.80 ರಷ್ಟು ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವಿಲ್ಲದೆ ಬೋರ್‌ವೆಲ್ ನೀರನ್ನೇ ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಸ್ಮಾರ್ಟ್ ಬೋರ್ಡ್, ಫ್ಯಾನ್ ಮತ್ತು ಲ್ಯಾಬ್ ಉಪಕರಣಗಳಿಗೆ ಸರ್ಕಾರದಿಂದ ಹಣ ಸಿಗದಿರಲು ಕಾರಣಗಳೇನು:</td>
<td>
ರಾಜ್ಯದ ಎಲ್ಲಾ ಶಾಲೆಗಳಲ್ಲಿ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದ್ದು, ಪ್ರಸ್ತುತ 204 ಶಾಲೆಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವನ್ನು ದುರಸ್ತಿಗೊಳಿಸಲಾಗುತ್ತಿದೆ. 2024-25ನೇ ಸಾಲಿನಿಂದ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತಿದೆ. 2024-25ನೇ ಸಾಲಿನಲ್ಲಿ ವಿದ್ಯುತ್ ವೆಚ್ಚಕ್ಕಾಗಿ ರೂ.750.00 ಲಕ್ಷಗಳು ಬಿಡುಗಡೆಯಾಗಿದ್ದು, ರೂ 692.62 ಲಕ್ಷಗಳ ವೆಚ್ಚ ಭರಿಸಿದೆ. 2025-26ನೇ ಸಾಲಿನಲ್ಲಿ ಉಚಿತ ವಿದ್ಯುತ್ ವೆಚ್ಚಕ್ಕಾಗಿ ರೂ.1500.00 ಲಕ್ಷಗಳು ಬಿಡುಗಡೆಯಾಗಿದ್ದು, ಇಲ್ಲಿಯವರೆಗೂ ರೂ. 544.00 ಲಕ್ಷಗಳ ವೆಚ್ಚ ಭರಿಸಿದೆ.
ಎಲ್ಲಾ ಶಾಲೆಗಳಲ್ಲಿ ಜಲಜೀವನ್ ಮಿಷನ್ ಅಡಿಯಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದ್ದು, ಪ್ರಸ್ತುತ 34 ಶಾಲೆಗಳಲ್ಲಿ ಕುಡಿಯುವ ನೀರಿನ ಪ್ಲಂಬಿಂಗ್ ದುರಸ್ತಿ ಅಗತ್ಯವಿದ್ದು, ಆಗಿಂದಾಗಲೇ ದುರಸ್ತಿಗೊಳಿಸಲು ಕ್ರಮವಹಿಸಿದೆ.
ಅನುದಾನದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಹಂತ ಹಂತವಾಗಿ ಆದ್ಯತೆಯ ಮೇರೆಗೆ ಎಲ್ಲಾ ಶಾಲೆಗಳಿಗೆ ಕಲ್ಪಿಸಲು ಕ್ರಮವಹಿಸಿದೆ.
</td>
</tr>
<tr>
<td>ಉ)</td>
<td>ಶಾಲೆಗಳ ಅಭಿವೃದ್ಧಿಗೆ ಮತ್ತು ಕೊಠಡಿಗಳ ದುರಸ್ತಿಗೆ ಸರ್ಕಾರದ ಅನುದಾನ ಸಾಲದೆ. ಸಾರ್ವಜನಿಕರು ಮತ್ತು ದಾನಿಗಳ ದೇಣಿಗೆಯನ್ನು ಆಶ್ರಯಿಸುವಂತೆ ಮಾನ್ಯ ಶಿಕ್ಷಣ ಸಚಿವರೇ ಹೇಳಿಕೆ ನೀಡಿರುವುದು ನಿಜವೇ: 2025-26ನೇ ಸಾಲಿಗೆ ಶಾಲಾ</td>
<td>
ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗಳ ಕೊಠಡಿ ದುರಸ್ತಿಗೆ ಕೆಳಕಂಡ ವಿವರದಂತೆ ಅನುದಾನ ಒದಗಿಸಲಾಗಿದೆ
<table>
<tr><th>ವರ್ಷ</th><th>ಮಂಜೂರಾದ ಅನುದಾನ (ಲಕ್ಷಗಳಲ್ಲಿ)</th><th>ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ)</th></tr>
<tr><td>2023-24</td><td>7000.00</td><td>7000.00</td></tr>
</table>
</td>
</tr>
</table>

<table>
<tr>
<td></td>
<td>ಕೊಠಡಿಗಳ ದುರಸ್ತಿಗೆ ಕೇವಲ ರೂ.100 ಕೋಟಿ ಶೌಚಾಲಯ ನಿರ್ಮಾಣಕ್ಕೆ 90 ಕೋಟಿ ನಿಗದಿಪಡಿಸಿದ್ದು. ಈ ಅನುದಾನವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ವಿವರ ನೀಡುವುದು)</td>
<td>
<table>
<tr><td>2024-25</td><td>15129.66</td><td>15129.66</td></tr>
<tr><td>2024-25 (SCP/TSP)</td><td>170.00</td><td>170.00</td></tr>
<tr><td>2025-26</td><td>9688.89</td><td>9688.89</td></tr>
<tr><td>2025-26 (SCP/TSP)</td><td>155.51</td><td>155.51</td></tr>
</table>
2026-27 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.45000.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಅನುದಾನದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಹಂತ ಹಂತವಾಗಿ ಆದ್ಯತೆಯ ಮೇರೆಗೆ ಎಲ್ಲಾ ಶಾಲೆಗಳಿಗೆ ಕಲ್ಪಿಸಲು ಕ್ರಮವಹಿಲಾಗುತ್ತಿದೆ.
</td>
</tr>
</table>

ಸಂಖ್ಯೆ: ಇಪಿ 85 ಎಂಸಿಡಿ 2026

(ಎಸ್. ಮಧು ಬಂಗಾರಪ್ಪ)

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

# ಅನುಬಂಧ-1

## ಶಾಲಾ ಕೊಠಡಿಗಳ ವಿವರ

- ಕಳೆದ 3 ವರ್ಷಗಳಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ

**ಹೊಸ ಕೊಠಡಿಗಳ ನಿರ್ಮಾಣದ ವಿವರ:**

| ಕ್ರ. ಸಂ. | ಯೋಜನೆ ಮಂಜೂರಾದ ವರ್ಷ | ಯೋಜನೆ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆ ಮಾಡಲಾದ ವರ್ಷ | ಬಿಡುಗಡೆ ಮಾಡಲಾದ ಅನುದಾನ ರೂ.ಲಕ್ಷಗಳಲ್ಲಿ |
|---|---|---|---|---|---|---|
| 1 | 2022-23 | ವಿವೇಕ | 5435 | 77682.58 | 2022-23 | 46901.84 |
| | | | | | 2023-24 | 16960.63 |
| | | | | | 2024-25 | 11462.11 |
| 2 | 2023-24 | ವಿವೇಕ | 159 | 2342.6 | 2024-25 | 2342.60 |
| 3 | 2024-25 | ರಾಜ್ಯ ವಲಯ ಯೋಜನೆ | 784 | 11529.65 | 2024-25 | 11529.65 |
| **ಒಟ್ಟು** | | | **6378** | **91,554.83** | | **89,196.83** |

## ಶಾಲಾ ಕೊಠಡಿಗಳ ದುರಸ್ತಿ ವಿವರ :-

- ಕಳೆದ 4 ವರ್ಷಗಳಲ್ಲಿ ಶಾಲಾ ಕೊಠಡಿಗಳ ದುರಸ್ತಿ ಕಾರ್ಯಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

| ವರ್ಷ | ಮಂಜೂರಾದ ಶಾಲೆಗಳು | ಮಂಜೂರಾದ ಅನುದಾನ(ರೂ.ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 2022-23 | 1878 | 4850 | 4850 |
| 2023-24 | 2162 | 7000 | 7000 |
| 2024-25 | 5744 | 15129.66 | 15129.66 |
| 2025-26 | 7293 | 10000 | 9688.89 |
| ಒಟ್ಟು | 17077 | 36,979.66 | 36,668.55 |

## ಶಾಲಾ ಶೌಚಾಲಯ ನಿರ್ಮಾಣ :-

- ನರೇಗಾ ಸಹಯೋಗದೊಂದಿಗೆ ರಾಜ್ಯವಲಯ ಯೋಜನೆಯಡಿ ಕಳೆದ 4 ವರ್ಷಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ. | ವರ್ಷ | ಮಂಜೂರಾದ ಶಾಲೆಗಳು | ಶೌಚಾಲಯಗಳ ಸಂಖ್ಯೆ | ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ |
|---|---|---|---|---|
| 01 | 2022-23 | 6962 | 7650 | 3500.00 |
| 02 | 2023-24 | | | 8000.00 |
| 03 | 2024-25 | | | 12106.65 |
| 04 | 2025-26 | 1250 | 1582 | 6328.00 |
| | **ಒಟ್ಟು** | **8212** | **9232** | **29934.65** |

**ಶಾಲಾ ಪೀಠೋಪಕರಣ:-**

- 2022-23ನೇ ಸಾಲಿನಲ್ಲಿ KSFIC ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳ ಹಂತದಲ್ಲಿ 5401 ಶಾಲೆಗಳಿಗೆ ಪೀಠೋಕರಣ ಸರಬರಾಜು ಮಾಡಲು ರೂ. 70.00 ಕೋಟಿಗಳ ಮತ್ತವನ್ನು ವೆಚ್ಚ ಮಾಡಲಾಗಿದೆ.

- 2025-26ನೇ ಸಾಲಿನಲ್ಲಿ ರೂ.35.00 ಕೋಟಿಗಳಲ್ಲಿ 6348 ಶಾಲೆಗಳಲ್ಲಿ ಡೆಸ್ಕಗಳನ್ನು ಒದಗಿಸಲು ಅನುದಾನ ಬಿಡುಗಡೆಯಾಗಿದ್ದು, 3 ಸೀಟರ್‌ನ 22694 ಹಾಗೂ 4 ಸೀಟರ್‌ನ 30991 ಡೆಸ್ಕಗಳಂತೆ ಒಟ್ಟು 53685 ಡೆಸ್ಕಗಳನ್ನು ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ.

ಉಪನಿರ್ದೇಶಕರು(ಯೋಜನೆ)